## 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| | |
|---|---|
| ಎಸ್ ಸಿ : | 231/**22** |

| | | |
|---|---|---|
| ಸಾಕ್ಷಿದಾರರ ಹೆಸರು | ಪದ್ಮಾ | |
| ಗಂಡನ ಹೆಸರು | ಲಿಂಗಾಚಾರಿ | ಸಾಕ್ಷಿಗೆ ದಿಃ **19.08.2022** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | **45** ವರ್ಷ | |
| ಉದ್ಯೋಗ | ಕೂಲಿ ಕೆಲಸ | ಪಿ.ಡಬ್ಲ್ಯೂ **-01** |
| ವಾಸ ಸ್ಥಳ | ಬ್ರಹ್ಮಪುರ ಗ್ರಾಮ, ನಗುವನಹಳ್ಳಿ, ಪೋಸ್ಟ ಶ್ರೀರಂಗಪಟ್ಟಣ ತಾಲ್ಲೂಕು. | ಸಿ.ಡಬ್ಲ್ಯೂ **-01** |

## ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1 ರಿಂದ 3 ನೇ ಆರೋಪಿತರು ನನ್ನ ಅಣ್ಣನ ಮಕ್ಕಳು ಇರುತ್ತಾರೆ. 4 ನೇ ಆರೋಪಿತಳು 1 ರಿಂದ 3 ನೇ ಆರೋಪಿತರ ತಾಯಿ ಇರುತ್ತಾಳೆ, ಅವಳು ನನಗೆ ಅತ್ತಿಗೆ ಆಗಬೇಕು. ಮೃತ ನಂಜಮ್ಮ ನನಗೆ ತಾಯಿ ಆಗಬೇಕು. ನಮ್ಮ ತಾಯಿ ಮೈಸೂರಿನಲ್ಲಿ ತನ್ನ ಸ್ವತಃ ಮನೆಯಲ್ಲಿ ವಾಸವಾಗಿದ್ದರು. ನಮ್ಮ ತಾಯಿ ವಾಸವಾಗಿರುವ ಮನೆ 2 ನೇ ಅಂತಸ್ತಿನ ಮನೆ ಇತ್ತು, ನನ್ನ ತಾಯಿ 2 ನೇ ಅಂತಸ್ತಿನಲ್ಲಿ ವಾಸವಾಗಿದ್ದರು, ನೆಲ ಮಹಡಿ ಬಾಡಿಗೆಗೆ ಕೊಟ್ಟಿದ್ದರು. 1 ನೇ ಅಂತಸ್ತಿನಲ್ಲಿ ಆರೋಪಿತರು ವಾಸವಾಗಿದ್ದರು.

ಸುಮಾರು 10 ತಿಂಗಳ ಹಿಂದೆ ದಿಃ 03.10.2021 ರಂದು ಮಧ್ಯಾಹ್ನ 12.30 ಗಂಟೆಗೆ ನಮ್ಮ ತಮ್ಮ ಬನ್ನೂರಿನ, ಮಾದೇಗೌಡನ ಹುಂಡಿಯ ಗ್ರಾಮದಲ್ಲಿ ವಾಸವಾಗಿದ್ದನು. ನಮ್ಮ ದೊಡ್ಡಪ್ಪನ ಮಗ  ಬಸವಾಚಾರಿ ಫೋನ್ ಮಾಡಿ ಅಮ್ಮನಿಗೆ ಹುಷಾರ್ ಇಲ್ಲ ಬಂದು ನೋಡಿ ಎಂದು ತಿಳಿಸಿದರು. ನಾವು ನಮ್ಮ ಅಕ್ಕನ ಮಗ ಶಿವಕುಮಾರನಿಗೆ ಫೋನ್ ಮಾಡಿ ಕರೆಸಿಕೊಂಡು ನಾನು ಮೈಸೂರಿಗೆ ಬಂದೆನು. ನಾವು ಮನೆಗೆ ಹೋಗಿ ನೋಡಿದಾಗ ಮನೆಯ ಕಿಟಕಿಯ ಗ್ಲಾಸ್ ಗಳು ಒಡೆದಿದ್ದವು, ಕಿಟಕಿಯಿಂದ ನೋಡಿದಾಗ, ನಮ್ಮ ತಾಯಿ

ಹಾಸಿಗೆ ಮೇಲೆ ಅಂಗಾತ್‌ವಾಗಿ ಮಲಗಿದ್ದು ನೋಡಿದೆವು, ನಂತರ ನಾವು ಎಲ್ಲಾ ಹೆಣ್ಣು ಮಕ್ಕಳು ಬಾಗಿಲು ಒಡೆದು ನೋಡಿದಾಗ ನಮ್ಮ ತಾಯಿಯ ಹಿಂದಿನ ತಲೆಗೆ, ಬಲ ಭಾಗದ ತಲೆಗೆ, ಹಣೆಗೆ, ಕೈ ಮತ್ತು ಕಾಲಿಗೆ ಕಾಯಗಳು ಆಗಿದ್ದವು, ನಮ್ಮ ತಾಯಿ ಮೃತಪಟ್ಟಿದ್ದರು. ನಮಗೆ ಯಾರೋ ನಮ್ಮ ತಾಯಿಗೆ ಹಲ್ಲೆ ಮಾಡಿದ್ದಾರೆ ಎಂದು ಸಂಶಯ ಬಂದು ನಾನು ಪಿರ್ಯಾಧಿ ಕೊಟ್ಟಿರುತ್ತೇನೆ. U.D.R ಪಿರ್ಯಾಧಿಯನ್ನು ನಿಪಿ-1 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಂತರ ಪೋಲಿಸರು ನಮ್ಮ ಮನೆಗೆ ದಿಃ 03.10.2021 ರಂದು ಸಂಜೆ 5.30 ಗಂಟೆ ಸುಮಾರಿಗೆ ಬಂದರು ನಾನು ಸ್ಥಳವನ್ನು ತೋರಿಸಿದೆನು, ನಮ್ಮ ತಾಯಿಯು ಮಲಗಿದ ಹಾಸಿಗೆ ರಕ್ತವಾಗಿತ್ತು. ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿ, ಮನೆಯ ಬೀಗದ ಕೈ (Key) ಮತ್ತು ಗಾಜಿನ ಚೂರುಗಳು ವಶಪಡಿಸಿಕೊಂಡು ಪಂಚನಾಮೆಯ ಮೇಲೆ ನಮ್ಮ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಯನ್ನು ನಿಪಿ-2 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮನೆಯ ಬೀಗದ ಕೈ (Key) ಮತ್ತು ಗಾಜಿನ ಚೂರುಗಳನ್ನು ಗುರುತಿಸಿದ್ದು, ಅವುಗಳನ್ನು ಎಂ.ಓ-1 ಮತ್ತು ಎಂ.ಓ-2 ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ಪ್ರಸನ್ನ ಮತ್ತು ಚೇತನ್ ಸ್ಥಳದಲ್ಲಿ ಇದ್ದರು. ಸಾಕ್ಷಿಯು ಪಂಚನಾಮೆಯ ಕಾಲದಲ್ಲಿ ತೆಗೆದ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ ನಿಪಿ-9 ಎಂದು ಗುರುತಿಸಲಾಯಿತು. ನಂತರ ಪೊಲೀಸರು ನಮ್ಮ ತಾಯಿಯ ಶವವನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ಶವ ಪಂಚನಾಮೆ ಆದ ನಂತರ ಆರೋಪಿತರೇ ನಮ್ಮ ತಾಯಿಯನ್ನು ಕೊಲೆ ಮಾಡಿದ್ದಾರೆ ಎಂದು ಪಿರ್ಯಾಧಿ ಕೊಟ್ಟಿರುತ್ತೇನೆ. ಪಿರ್ಯಾಧಿಯನ್ನು ನಿಪಿ-10 ಎಂದು, ಅದರ ಮೇಲಿರುವ ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ಆರೋಪಿತರು ನಮ್ಮ ತಾಯಿಗೆ ಹಿಂಸೆ ಕೊಡುತ್ತಿದ್ದರು, ಒಂದು ಸಲಾ ಕೈ ಮುರಿದಿದ್ದರು. ನಾನು ನಮ್ಮ ತಾಯಿಗೆ ಆರೋಪಿತರ ಸಹವಾಸಕ್ಕೆ ಹೋಗಬೇಡಿ ಎಂದು ಹೇಳಿರುತ್ತೇನೆ. ನಮ್ಮ ತಾಯಿಗೆ ಆರೋಪಿತರು ಊಟವನ್ನು ಕೊಡುತ್ತಿರಲಿಲ್ಲ. ನಮ್ಮ ಅಣ್ಣನಿಗೆ ಮದುವೆಯಾದ ನಂತರ ಹಿಂಸೆ ಕೊಡುತ್ತಿದ್ದರು. ನಮ್ಮ ಅಣ್ಣನು 10 ವರ್ಷದ ಹಿಂದೆ ಮೃತಪಟ್ಟಿರುತ್ತಾನೆ. ದಿಃ 02.10.2021 ರಂದು ಆರೋಪಿತರು ನಮ್ಮ ತಾಯಿಯನ್ನು ಹಿಂಸೆ ಮಾಡಿ, ಕೊಲೆ ಮಾಡಿರುತ್ತಾರೆ. ( ಮೂಲ ದಾಖಲೆಗಳು ಎಸ್.ಸಿ ನಂಬರ್ 18/22 ರಿಂದ ತರಿಸಿಕೊಂಡು ನಿಶಾನೆ ಎಂದು ಗುರುತಿಸಿ ಅದೇ ಕೇಸಿಗೆ ರವಾನಿಸಲಾಯಿತು.)

**<u>ಪಾಟೀಸವಾಲು :- ಎಲ್ಲಾ ಆರೋಪಿತರ ಪರ ವಕೀಲರಿಂದಃ-</u>**

ಆರೋಪಿತರ ಪರ ವಕೀಲರು ಸಮಯ ಕೇಳಿದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು